# ಒಂದು ಪೀಠಿಕೆ

## ಕೀರ್ತನೆ 5:3

*"ಯೆಹೋವನೇ, ಉದಯಕಾಲದಲ್ಲಿ ನನ್ನ ಸ್ವರವು ನಿನಗೆ ಕೇಳಿಸುವದು; ಉದಯಕಾಲದಲ್ಲಿಯೇ [ಪ್ರಾರ್ಥನೆಯನ್ನು] ಸಮರ್ಪಿಸಿ ಸದುತ್ತರವನ್ನು ಎದುರು ನೋಡುತ್ತಿರುವೆನು" (ಕೀರ್ತನೆ 5:3).*

ನನ್ನ ಜೀವಿತ ಮತ್ತು ನನ್ನ ಸೇವೆಯು ಒಂದು ಧ್ವನಿ ಸುರುಳಿಯಿಂದ 1978ರಲ್ಲಿ ಆಮೂಲಾಗ್ರವಾಗಿಯೂ ನಿತ್ಯವಾಗಿಯೂ ಬದಲಾಯಿಸಲ್ಪಟ್ಟಿತು. ಒಬ್ಬ ವಯಸ್ಕ ಆತ್ಮಿಕ ದೈತ್ಯನು ದೇವರೊಂದಿಗೆ ಅವರ ಆತ್ಮಿಕ ಸಂಬಂಧವನ್ನು ಕುರಿತು ಪ್ರಸಂಗಿಗಳಿಗೆ ಬೋಧಿಸುತ್ತಿದ್ದನು. ಅರವತ್ತಕ್ಕಿಂತ ಹೆಚ್ಚು ವರ್ಷಗಳಿಂದ ಅವನು ದೇವರಿಗೆ ಪ್ರತಿದಿನದ ಪ್ರಥಮ ತಾಸನ್ನು ಕೊಡತ್ತಿದ್ದನು. ದೇವರೊಂದಿಗಿನ ನನ್ನ ದೈನಂದಿನ ನಡೆಯುವಿಕೆಯು ಕಠಿಣವಾದದ್ದಾಗಿದ್ದರೂ, ಅದು ಸರಳವಾದದ್ದಾಗಿತ್ತು. ನಮ್ಮಲ್ಲಿ ಎಷ್ಟು ಜನರಿಗೆ ಪ್ರತಿದಿನದ "ಪ್ರಥಮ ತಾಸು" ಇರುವುದು? ನಾವು ಅದರೊಂದಿಗೆ ಏನು ಮಾಡುತ್ತೇವೆ? ನನ್ನದು "ಒಂದು ಕಪ್ *ಕಾಫೀ* ಮತ್ತು *ಡಲ್ಲಾಸ್ ಮೊರ್ನಿಂಗ್ ನ್ಯೂಸ್‌ಗೆ*" ಕೊಡಲ್ಪಟ್ಟಿರುತ್ತದೆ. ದೇವರೊಂದಿಗೆ ಪ್ರತಿದಿನ ಪ್ರಾರಂಭಿಸುವದಕ್ಕಿಂತ ಯಾವುದು ಉತ್ತಮ ಮಾರ್ಗವಾಗಿದೆ? ಇದನ್ನು ಐವತ್ತು ವರ್ಷಗಳಿಂದ ಮಾಡಿದ್ದರೆ ಏನಾಗುವುದು? ಆತ್ಮಿಕ ದೈತ್ಯನಾಗಿರುವುದು, ಬುದ್ಧಿವಂತಿಕೆಯ, ವಿದ್ಯೆಯ, ತಲಾಂತಿನ ಇಲ್ಲವೇ ವ್ಯಕ್ತಿತ್ವದ ವಿಷಯವಾಗಿರುವದಿಲ್ಲ. ಸಮಯ ಕೊಡಲ್ಪಟ್ಟರೆ, ನಾವೆಲ್ಲರೂ ಆತ್ಮಿಕ ದೈತ್ಯರಾಗಬಹುದು! ದೇವರೊಂದಿಗೆ ನಿನ್ನ ಅನುದಿನದ ನಡೆಯುವಿಕೆಯಲ್ಲಿ ಬೆಳೆಯಬಹುದು.

### ಸರಳತೆ

ದೇವರೊಂದಿಗೆ ದಿನವನ್ನು ಪ್ರಾರಂಭಿಸುವುದು ಬಹಳ ಸರಳವಾದದ್ದೂ ಬುದ್ಧಿವಂತಿಕೆಯುಳ್ಳದ್ದೂ ಆಗಿದೆ. ಸಮಸ್ಯೆಗಳ ಮೇಲೆ "ಕಾರ್ಯಮಾಡಲು" ಹೆಚ್ಚು ಬಯಸುತ್ತೇವೆ. "ಹೇಗೆ ಮಾಡಬೇಕು" ಎಂಬ ಪುಸ್ತಕಗಳನ್ನು ಓದುತ್ತೇವೆ ಮತ್ತು ಸ್ವಸಹಾಯಕ ಧ್ವನಿಸುರುಳಿಗಳಿಗೆ ಕಿವಿಗೊಡುತ್ತೇವೆ. ಚರ್ಚಾಗೋಷ್ಠಿಗಳನ್ನೂ ರಿಟ್ರೀಟ್‌ಗಳಲ್ಲಿಯೂ ಭಾಗವಹಿಸುತ್ತೇವೆ. ಉತ್ತಮ ಜೊತೆಗಾರರಾಗಿರುವುದು ಮತ್ತು ತಂದೆತಾಯಿಗಳಾಗಿರುವುದು, ಚಿಂತೆ, ವ್ಯಯ ಮತ್ತು ಗುಣಗುಟ್ಟುವದನ್ನು ಹೇಗೆ ಜಯಿಸುವುದು ಎಂಬುದನ್ನು ಅಧ್ಯಯನ ಮಾಡುತ್ತೇವೆ. ಅಂಥ ವಿಧಾನಗಳು ಸೂತ್ರಗಳೊಂದಿಗೆ, ಕಲೆಗಳೊಂದಿಗೆ ಮತ್ತು ಸಾಮಾನ್ಯವಾದ ನಿರಾಶೆಗಳೊಂದಿಗೆ ಅಂತ್ಯಗೊಳ್ಳುತ್ತವೆ. ದೇವರೊಂದಿಗೆ ಯಾಕೆ ನಡೆಯಬಾರದು? ಬೈಬಲು ವ್ಯಕ್ತಿಗಳ ಮೇಲೆ ಕೇಂದ್ರೀಕರಿಸುತ್ತದೆ ಆದರೆ ಬದ್ಧಿಗಳ ಮೇಲಲ್ಲ. ದೇವರು ನಿನಗೆ ತೊಂದರೆಯನ್ನಾಗಲೀ, ಆತಂಕವನ್ನಾಗಲೀ ಉಂಟು ಮಾಡುವದಿಲ್ಲ! ಅನುದಿನವೂ ನಾನು ದೇವರೊಂದಿಗೆ ನಡೆಯುವಾಗ, ನನ್ನ ಹೆಂಡತಿಗೆ ಯಾಂತ್ರಿಕವಾಗಿ ಉತ್ತಮ ಗಂಡನಿರುವನು, ನನ್ನ ಮಕ್ಕಳಿಗೆ ಉತ್ತಮ ತಂದೆಯಿರುವನು, ಮತ್ತು ನಾನು ಸೇವೆ ಮಾಡುವ ಸಭೆಗೆ ಉತ್ತಮ ಪ್ರಸಂಗಿಯಿರುವನು! ಸುವಾರ್ತೆಯು ಹೆಚ್ಚು ಉತ್ತಮ ವ್ಯಕ್ತಿಗಳನ್ನು ಮಾಡುವುದು! ನಾವು

ಆರಾಧಿಸುವ ಮತ್ತು ನಡೆಯುವ ದೇವರಂತೆ ನಾವು ಆಗುವೆವು. ಆತ್ಮಿಕ ಕಾರ್ಯವು ಆತ್ಮಿಕ ಜನರಿಂದ ಮಾತ್ರವೇ ಮಾಡಲ್ಪಡುವುದು.

ಒಂದು ನಿಮಿಷಕ್ಕಾದರೂ ನಾನು ಪರಿಪೂರ್ಣನಾಗಿರಲಾರೆನು, ಆದರೆ ಒಂದು ಸಲಕ್ಕೆ ಒಂದು ದಿನ ನಾನು ನಂಬಿಗಸ್ತನಾಗಿರಬಹುದು (ಪ್ರಕಟನೆ 2:10). ಎಂಥಾ ಪರಿಹಾರ! ನಾನು ನಂಬಿಗಸ್ತನಾಗಿದ್ದರೆ ಕರ್ತನು ಯಾವ ದಿನ ಹಿಂದಿರುಗಿ ಬಂದರೂ ನನಗೆ ಚಿಂತೆಯಿರುವದಿಲ್ಲ! ಇದು ನಮ್ಮ ಸಭೆಯ ಹಾಜರಾತಿಯ ಸಮಸ್ಯೆಯನ್ನು ಪರಿಹರಿಸುವುದು! ದೇವರೊಂದಿಗೆ ನಡೆಯುತ್ತಿರುವ ಜನರು "ಸಭೆಯನ್ನು ಬಿಟ್ಟುಬಿಡುವದಿಲ್ಲ." ದೇವರು ಭಾನುವಾರ ಎಲ್ಲಿರುವನು? ದೇವರೊಂದಿಗೆ ನಡೆಯುವ ಜನರು ಆತನಿರುವಲ್ಲಿ ಇರುವರು. ಈ ಭೂಲೋಕದ ಜೀವಿತಕ್ಕೆ ನಿತ್ಯಜೀವವು ಮಾತ್ರವೇ ತಳಹದಿಯಾಗಿರುವುದು.

ಈ ದಿನವು ನನಗೆ ಬೇಕಾದದ್ದೆಲ್ಲಾ ಆಗಿರುವುದು -
ಈ ದಿನವು ನಾನು ಕೈಕೊಳ್ಳಬಹುದಾದದ್ದೆಲ್ಲಾ ಆಗಿರುವುದು -
ಈ ದಿನವು ನನಗಿರುವದೆಲ್ಲವೂ ಆಗಿರುವುದು.

ಕೆಲವು ಎರಡು ಹೆಜ್ಜೆಗಳು ಮಾತ್ರ ಜೀವಿತವನ್ನು ರಚಿಸುವವು (ಯಾವುದೇ ಕ್ಷೇತ್ರದಲ್ಲಿ ಅವುಗಳೇ ಶ್ರೇಷ್ಠತೆಗೆ ಅನ್ವಯಿಸುತ್ತವೆ). ಮೊದಲನೆಯದು, *ಪ್ರಾರಂಭಿಸು. ಈಗ* ... ನೀನು ಪ್ರಾರಂಭಿಸತಕ್ಕದ್ದು! ಎರಡನೆಯದು, *ನಿಲ್ಲಿಸಬೇಡ*! ಕ್ರೈಸ್ತತ್ವವು ನಡೆಯುವಿಕೆಯಿಂದ ಅನುಸರಿಸಲ್ಪಟ್ಟ ಹೆಜ್ಜೆಯಾಗಿದೆ. ನಿನ್ನ ಒಂದೇ ಒಂದು ಜೀವಿತಕ್ಕಾಗಿ ನೀನು ಏನು ಮಾಡಲಿಕ್ಕಿದ್ದೀ? ದೇವರೊಂದಿಗೆ ನಡೆಯುವ ಒಬ್ಬ ವ್ಯಕ್ತಿಗಿಂತ ಹೆಚ್ಚು ಉತ್ತಮನಾಗಿರಲಾರಿ. ಪ್ರತಿಯೊಂದು ಕ್ಷಣವನ್ನು ನಾವು ದೇವರೊಂದಿಗೆ ಕಳೆಯುತ್ತಿದ್ದೇವೆಂದು ಅರ್ಥಮಾಡಿಕೊಳ್ಳುವಾಗ ಜೀವಿಸುವಿಕೆಯು ಭಯಭಕ್ತಿಯುಳ್ಳದ್ದಾಗಿರುವುದು. ರಹಸ್ಯವು ಒಬ್ಬ ಭಕ್ತಿಯುಳ್ಳ ಜೀವಿತದಲ್ಲಿರುವುದು; ಒಬ್ಬನ ಆತ್ಮಿಕ ಜೀವನದ ಅಳತೆಯ ಯಂತ್ರವು ಅವನ ಭಕ್ತಿ ಪೂರ್ವಕವಾದ ಜೀವಿತವಾಗಿದೆ.

## ವ್ಯಾಖ್ಯಾನಿಕವಾಗಿ ಮಾತಾಡುವುದು

ಹೊಮಿಲಿಟಿಕ್ಸ್ ಎಂಬುದು ಪಾಠಗಳನ್ನು ರಚಿಸುವ ವಿಜ್ಞಾನವಾಗಿದೆ. ಪಾಠದ ಶೀರ್ಷಿಕೆಯಲ್ಲಿ - "ದೇವರೊಂದಿಗೆ ನನ್ನ ಅನುದಿನದ ನಡೆಯುವಿಕೆ"ಯಲ್ಲಿಯ ಪ್ರತಿಯೊಂದು ಪದವನ್ನು ಸಂಬೋಧಿಸುವುದು ಒಂದು ಮಾರ್ಗವಾಗಿದೆ.

1. *"ದೇವರು."* ಶೀರ್ಷಿಕೆಯಲ್ಲಿ "ದೊಡ್ಡ ಪದ" ಯಾವುದು? ದೇವರು! ಮಿತಿಯಿಲ್ಲದವನು, ಮಾರ್ಪಡದವನು, ನಿತ್ಯನು, ಪರಿಶುದ್ಧನಾದ ದೇವರು! ನಮ್ಮ ಸಮಾಜವು ಸಾರ್ವಭೌಮ, ಸೃಷ್ಟಿಸುವ, ಪರಿಶುದ್ಧನಾದ, ಮನುಷ್ಯನ ತಿಳುವಳಿಕೆಯನ್ನು ಮೀರಿದ ದೇವರು ಇರುವದರ ಅರ್ಥವನ್ನು ಕಳೆದುಕೊಂಡಿದೆ. ದೇವರು ದೇವರಾಗಿದ್ದಾನೆ ಮತ್ತು ನಾನು ಆಗಿರುವದಿಲ್ಲ. ದೇವರ "ದೇವತ್ವವನ್ನು" ಯೋಚಿಸಿರಿ. ದೇವರು ಸಂಪೂರ್ಣವಾದವನು, ಪ್ರತ್ಯೇಕವಾಗಿರುವವನು, ನ್ಯಾಯವಂತನು, ನೀತಿವಂತನು, ದಯೆಯುಳ್ಳವನು ಮತ್ತು ಸತ್ಯವಂತನು ಆಗಿದ್ದಾನೆ. ದೇವರಿಗಾಗಿ ನಮಗೆ "ಪರಿಶುದ್ಧ ಹಸಿವೆ" ಇರತಕ್ಕದ್ದು. ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದನು (ಆದಿಕಾಂಡ 1:26, 27). ಮನುಷ್ಯನು ಇಂದು ಮನುಷ್ಯನ ಸ್ವರೂಪದಲ್ಲಿ ದೇವರನ್ನು ಪುನಃ ಸಂಶೋಧಿಸಿದ್ದಾನೆ. "ಅಂಥಹ ದೇವರಲ್ಲಿ ನಾನು ನಂಬಲಾರೆನು" ಎಂದು

ಜನರು ಹೇಳಿದ್ದಾರೆ. ದೇವರು ಯಾವ ರೀತಿಯಲ್ಲಿ ಇರಬೇಕೆಂದು ತೀರ್ಮಾನಿಸುವದಕ್ಕೆ ಮನುಷ್ಯನು ಎಷ್ಟರವನು? "ಸೃಷ್ಟಿಕರ್ತನನ್ನು" ಬಿಟ್ಟು "ಸೃಷ್ಟಿಸಲ್ಪಟ್ಟದ್ದನ್ನು" ಆರಾಧಿಸಿದ್ದಕ್ಕಾಗಿ ಪೌಲನು ತನ್ನ ಸಮಾಜವನ್ನು ಗದರಿಸಿದನು (ರೋಮಾಪುರ 1:16-32). ಯಾವುದೇ ಪಾಷಂಡವಾದವು ದೇವರನ್ನು ಮಾನವ ಸ್ವರೂಪದಲ್ಲಿ ಸೃಷ್ಟಿಸುವದಕ್ಕಿಂತ ಹೆಚ್ಚಾಗಿ ಮೋಸಕರವಾದದ್ದಾಗಿರುವದಿಲ್ಲ! ದಶಾಜ್ಞೆಗಳಲ್ಲಿ ಮೊದಲನೆಯ ಆಜ್ಞೆಯು *ದೊಡ್ಡ* ಆಜ್ಞೆಯಾಗಿದೆ: "ನಾನಲ್ಲದೆ ನಿನಗೆ ಬೇರೆ ದೇವರುಗಳು ಇರಬಾರದು" (ವಿಮೋಚನಕಾಂಡ 20:3).

ಒಂದು ಸರಳ ಕಾರಣಕ್ಕಾಗಿ - ನಾವು ದೇವರನ್ನು ತಿರಸ್ಕರಿಸಿದ್ದಕ್ಕಾಗಿ ಇಂದು ಸಮಾಜವು ನಮ್ಮ ನಿಯಂತ್ರಣದಿಂದ ತಪ್ಪಿಹೋಗಿದೆ! ಸಂಗತಿಗಳನ್ನು ಒಂದಾಗಿ ಕೂಡಿಸಿ ಹಿಡಿಯಲಿಕ್ಕೆ ನಮಗೆ ಒಂದು ಕೇಂದ್ರವಿರುವದಿಲ್ಲ. ಪ್ರತಿಯೊಂದು ದಿನವೂ ದೇವರಿಂದ ಬಂದ ಒಂದು ವರವಾಗಿದೆ. ನಮ್ಮ ಜೀವಿತಗಳ ಪ್ರತಿಯೊಂದು ದಿನದಲ್ಲಿ, ದೊಡ್ಡ ತೀರ್ಮಾನಗಳು ಮತ್ತು ಅಲ್ಪ ವಿಷಯಗಳು ಎರಡರಲ್ಲಿಯೂ ದೇವರು ಇರುತ್ತಾನೆ. ದೇವರಿಗಾಗಿ ಯಾವುದೂ ಅತೀ ದೊಡ್ಡದಾಗಿರುವದಿಲ್ಲ; ದೇವರಿಗಾಗಿ ಯಾವುದೂ ಅತೀ ಸಣ್ಣದಾಗಿರುವದಿಲ್ಲ. ನಮ್ಮ ಸಮಾಜವು ಎಲ್ಲಾ ತಪ್ಪಾದ ಸ್ಥಳಗಳಲ್ಲಿ ಸತ್ಯಕ್ಕಾಗಿ ಹುಡುಕುತ್ತಲಿದೆ. ದಿನದಿನವೂ ದೇವರಿಗೆ ಸ್ತೋತ್ರ ಹೇಳು, ದೇವರನ್ನು ಆಲಿಸು, ದೇವರೊಂದಿಗೆ ಮಾತನಾಡು, ದೇವರೊಂದಿಗೆ ಜೀವಿಸು. *ಕಂಡುಕೊಳ್ಳುವುದಕ್ಕಾಗಿ* ಮಾತ್ರವೇ ನಾವು *ಹುಡುಕಲು* ಪ್ರಾರಂಭಿಸುತ್ತೇವೆ. *ಯಾವನಿಂದಲಾದರೂ* ಹಿಡಿಯಲ್ಪಡಲಿಕ್ಕಾಗುವಂತೆ, *ಏನನ್ನಾದರೂ* ಕಂಡುಕೊಳ್ಳಲಿಕ್ಕೆ ಪ್ರಾರಂಭಿಸುತ್ತೇವೆ. ನಮ್ಮ ದೈನಂದಿನ ನಡೆಯುವಿಕೆಯಲ್ಲಿ ಪ್ರಗತಿಯ ಮುಖಾಂತರ ಮುಂದುವರಿಯುತ್ತೇವೆ:

"ನನ್ನ ಜೀವನದಲ್ಲಿ ನನಗೆ ದೇವರ ಅಗತ್ಯತೆಯಿದೆ."
"ನನ್ನ ಜೀವನದಲ್ಲಿ ನನಗೆ ದೇವರು ಬೇಕು."
"ನನ್ನ ಜೀವನದಲ್ಲಿ ನನಗೆ ದೇವರು ಇರತಕ್ಕದ್ದು!"

2. *"ನಡೆ."* ಕ್ರೈಸ್ತತ್ವವು ಒಂದು *ನಡೆಯಾಗಿದೆ,* ಆದರೆ *ಮಾತುಗಾರಿಕೆ* ಆಗಿರುವದಿಲ್ಲ. ಅನೇಕರು *ಮಾತಾಡುವದನ್ನು* ಮಾತಾಡುತ್ತಾರೆ. ಆದರೆ *ನಡೆಯುವದನ್ನು* ನಡೆಯುವದಿಲ್ಲ: ಕ್ರೈಸ್ತತ್ವವು ಮಾತಿಗಿಂತ ಹೆಚ್ಚಾದದ್ದಾಗಿರದಿದ್ದರೆ, ನಮ್ಮಲ್ಲಿ ಹೆಚ್ಚಾದವರು ಪರಲೋಕ ಮಾರ್ಗದಲ್ಲಿರುತ್ತಿದ್ದೆವು. ಅಪೊಸ್ತಲರ ಕೃತ್ಯಗಳು 17ರಲ್ಲಿ ಅರಿಯೊಪಾಗದಲ್ಲಿಯ ಜನರು "ಹೊಸ ಹೊಸ ಸಂಗತಿಗಳನ್ನು ಹೇಳುವದಕ್ಕೂ ಕೇಳುವದಕ್ಕೂ" ಸಮಯ ಕೊಡುತ್ತಿದ್ದರು (ವಚನ 21ಬಿ). ಅವರು ಸುವಾರ್ತೆಯನ್ನು ತಿರಸ್ಕರಿಸಿದರು ... ಪೌಲನ ಕಡೆಗೆ ಅವರು ಅಪಹಾಸ್ಯ ಮಾಡಿದರು. ಆತ್ಮಿಕತೆಯು ಒಂದು ನಡೆಯುವಿಕೆಯನ್ನು ಒಳಗೊಂಡಿರುತ್ತದೆ. ಒಂದು ಭಾವನೆಯನ್ನು ಒಳಗೊಂಡಿರುವದಿಲ್ಲ, ಭಾವನೆಗಳಿಗೆ ಬೈಬಲು ಎಷ್ಟು ಅಲ್ಪ ಗಮನವನ್ನು ಕೊಡುವದೆಂಬುದನ್ನು ನೋಡಿರುವಿಯೋ? ಪ್ರತೀ ದಿನದ ಜೀವನದ ಮಧ್ಯದಲ್ಲಿ ಮನುಷ್ಯನೊಂದಿಗೆ ದೇವರು ನಡೆಯುತ್ತಾನೆ. *ಎಂಥಾ ದೇವರು! ಎಂಥಾ ಜೀವಿತ!*

ವಿಮಾನದ ಚಾಲಕರು ನೆಲದ ಮೇಲಿನ ಶಾಲೆಯೊಂದಿಗೆ ಪ್ರಾರಂಭಿಸುತ್ತಾರೆ. ನಮ್ಮ ಹೈ - ಟೆಕ್ ಜಗತ್ತಿನಲ್ಲಿ ಇದು ಈಗ ನಿರ್ಣಾಯಕವಾದದ್ದಾಗಿದೆ. ಹೀಗಿದ್ದರೂ ಒಬ್ಬನು ಅಭ್ಯಾಸ ಮಾಡಬಹುದು, ಪರೀಕ್ಷೆಗಳಲ್ಲಿ ಉತ್ತೀರ್ಣನಾಗಬಹುದು - ಮತ್ತು ಅವನು ವಾಯುಮಾನದಲ್ಲಿ ಪರಿಣಿತನಾಗಬಹುದು. ಆದರೆ ಅವನು ವಿಮಾನ ಹಾರಿಸುವದನ್ನು ಕಲಿಯುವವರೆಗೆ ಅರ್ಹತೆಯುಳ್ಳ ವೈಮಾನಿಕನಾಗುವದಿಲ್ಲ. ನೆಲದ

ಮೇಲಿನ ಶಾಲೆ ಮಾತ್ರವೇ ವೈಮಾನಿಕನನ್ನಾಗಿ ಮಾಡುವದಿಲ್ಲ! ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ರೂಢಿಸುವಿಕೆಯು, ರೂಢಿಸುವಿಕೆಯು, ರೂಢಿಸುವಿಕೆಯು ಅಗತ್ಯವಾಗಿರುತ್ತದೆ. ನೀವು ಪ್ರಾರ್ಥಿಸುವುದರಿಂದ ಪ್ರಾರ್ಥಿಸುವದನ್ನು ಕಲಿಯುವಿರಿ; ನಡೆಯುವದರಿಂದ ನಡೆಯುವದನ್ನು ಕಲಿಯುವಿರಿ. "ತಕ್ಷಣದ ಆತ್ಮಿಕತೆ" ಇರುವದಿಲ್ಲ. ಅತಿಯಾದ ಭಕ್ತಿಯಿಂದ ಮಾತಾಡುವ ಜನರು ಸುತ್ತಲೂ ಇರುವಾಗ ನಾನು ಭಯಪಡುತ್ತೇನೆ.

ಈ ನಡೆಯುವಿಕೆಯು ಮಾರಾತೊನ್ ಆಗಿದೆ, ಒಂದು ಓಡುವಿಕೆಯಾಗಿರುವದಿಲ್ಲ. ಇದೊಂದು "ಪಾರ್ಕಿನಲ್ಲಿಯ" ಓಟವಾಗಿರುವದಿಲ್ಲ. ಇದು ತಮಾಷೆ, ತಮಾಷೆ, ತಮಾಷೆಯಾಗಿರುವದಿಲ್ಲ. ನನ್ನ ನಡೆಯುವಿಕೆಯನ್ನು ನನಗಾಗಿ - ನನ್ನ ತಾಯಿಯಾಗಲಿ, ನನ್ನ ಪ್ರಸಂಗಿಯಾಗಲಿ - ಬೇರೆ ಯಾರೂ ನಡೆಯಲಾರರು. ನಾನು ನನ್ನ ಸ್ವಂತ ನಡೆಯುವಿಕೆಗಾಗಿ ನಾನೇ ಜವಾಬ್ದಾರನಾಗಿದ್ದೇನೆ.

3. *"ಅನುದಿನವೂ."* ಜೀವಿತವು ನಿತ್ಯವಾಗಿ ಅನುದಿನದ್ದಾಗಿದೆ. ಮಾನವ ಕ್ಯಾಲೆಂಡರಿಗೆ ಕೇವಲ ಮೂರು ದಿನಗಳಿವೆ - ನಿನ್ನೆಯ ದಿನ, ಇಂದಿನ ದಿನ ಮತ್ತು ನಾಳೆಯ ದಿನ. ನಿನ್ನೆಯ ದಿನವು ದಾಟಿಹೋಗಿದೆ ಮತ್ತು ಅದನ್ನು ಬದಲಾಯಿಸಲಿಕ್ಕಾಗದು. ನಾಳಿನ ದಿನವು ಎಂದಿಗೂ ಬರುವದಿಲ್ಲ. ನಾನು ಇಂದಿನ ದಿನದೊಂದಿಗೆ ಸಿಕ್ಕಿಕೊಂಡಿದ್ದೇನೆ. ದೇವರು ನಮ್ಮನ್ನು ನಿನ್ನೆಯ ದಿನ ಇಲ್ಲವೇ ನಾಳೆಯ ದಿನ ಎಂದು ಕರೆಯುವದಿಲ್ಲ; ಆತನು ಇಂದು ನಮ್ಮನ್ನು ಕರೆಯುತ್ತಾನೆ. ನಿನ್ನೆ ಏನು ಸಂಭವಿಸಿದ್ದರೂ ಸಹ, ನಾನು ಇಂದು ನಂಬಿಗಸ್ತನಾಗಿರಬಹುದು. ಹಾಗೆಯೇ, ಇಂದು ದೇವರ ಕೃಪೆಯು ನಾಳೆಗಾಗಿ ಸಾಕಷ್ಟಾಗಿರುವದಿಲ್ಲ! ದೇವರ ಕೃಪೆಯು ಅನುದಿನವೂ ನಮ್ಮ ನಂಬಿಗಸ್ತಿಕೆಗಾಗಿ ಇರುವುದು.

ನಮ್ಮ ಶಿಲುಬೆಯನ್ನು ಅನುದಿನವೂ ಹೊತ್ತುಕೊಂಡು ಬರಬೇಕೆಂದು ಯೇಸು ನಮಗೆ ಹೇಳಿದನು (ಲೂಕ 9:23). ತಾನು ದಿನ ನಿತ್ಯವೂ ಸತ್ತು ಹೋದೆನೆಂದು ಪೌಲನು ಹೇಳಿದನು (1 ಕೊರಿಂಥ 15:31). ಆದಿ ಸಭೆಯು ದಿನದಿನವೂ ಸುವಾರ್ತೆ ಸಾರಿತು: "... ಪ್ರತಿದಿನ ಎಡೆಬಿಡದೆ ದೇವಾಲಯದಲ್ಲಿಯೂ ಮನೆಮನೆಯಲ್ಲಿಯೂ ಉಪದೇಶಮಾಡುತ್ತಾ ಕ್ರಿಸ್ತನಾದ ಯೇಸುವಿನ ವಿಷಯವಾದ ಶುಭವರ್ತಮಾನವನ್ನು ಸಾರುತ್ತಾ ಇದ್ದರು" (ಅಪೊಸ್ತಲರ ಕೃತ್ಯಗಳು 5:42). *ಅನುದಿನವೂ!* ನಾವೂ *ಅನುದಿನವೂ* ಊಟ ಮಾಡುತ್ತೇವೆ, ಮಲಗುತ್ತೇವೆ ಹಾಗೂ ಜೀವಿಸುತ್ತೇವೆ! ಹೀಗಿದ್ದರೂ, *ಪ್ರತಿದಿನವೂ* ಸರಿಯಾದ ಮಾರ್ಗದಲ್ಲಿ ಜೀವಿಸುವುದು ಅತೀ ಕಷ್ಟಕರವಾದದ್ದಾಗಿದೆ. ಈಸ್ಟರಿಗಾಗಿ ಬಟ್ಟೆ ಧರಿಸುವುದು ಸುಲಭ; ನಾವೆಲ್ಲರೂ *ದೊಡ್ಡ* ದಿನಗಳಲ್ಲಿ *ದೊಡ್ಡ*ವರಾಗಿರುತ್ತೇವೆ. ನಾವೆಲ್ಲರೂ "ಕೆಲವೊಂದು ದೊಡ್ಡ ಸಂಗತಿಗಳನ್ನು" ಮಾಡಲು ಬಯಸುತ್ತೇವೆ. ದೇವರು ಬಯಸುವಂಥದ್ದೆಲ್ಲವೂ ನಮ್ಮ ದೈನಂದಿನ ನಡೆಯುವಿಕೆಯಾಗಿದೆ. "ಪ್ರಭಲವಲ್ಲದ" "ಧಾರ್ಮಿಕ ಭಾವನೆಗಳು" ಸೋತು ಹೋಗುತ್ತವೆ. ಕ್ರೈಸ್ತತ್ವವು ಒಂದು ನಡೆಯುವಿಕೆಯಾಗಿದೆ, ಉರುಳುವ ನಾವೆಯಾಗಿರುವದಿಲ್ಲ!

*"Carpe diem"* ... "ದಿನವನ್ನು ಹಿಡಿದುಕೋ!" "ಈ ದಿನವು ಯೆಹೋವನಿಂದಲೇ ನೇಮಕವಾದದ್ದು; ಇದರಲ್ಲಿ ನಾವು ಉಲ್ಲಾಸದಿಂದ ಆನಂದಿಸೋಣ" (ನೋಡಿರಿ ಕೀರ್ತನೆ 118:24). ಅದನ್ನು ಉಪಯೋಗಿಸಿರಿ. ಅದರ ಸದುಪಯೋಗ ತೆಗೆದುಕೊಳ್ಳಿರಿ. ಭಕ್ತಿಯ ಜೀವಿತವು ದಿನದಿನವೂ ಯಾವುದು ಸರಿಯಾದದ್ದಾಗಿದೆಯೋ, ಅಗತ್ಯವಾದದ್ದಾಗಿದೆಯೋ ಅದನ್ನು ಆಯ್ದುಕೊಳ್ಳುವದನ್ನು ಒಳಗೊಂಡಿರುತ್ತದೆ. ಒಬ್ಬನ ಸಂಗಾತಿಗೆ ಆಶ್ಚರ್ಯಕರವಾದ ಕಾಣಿಕೆಯು ಎಂದಿಗೂ ಅನುದಿನದ ಯೋಚನೆಗೆ ಮತ್ತು ಗೌರವಕ್ಕೆ ಸಮಾನವಾಗಿರಲಾರದು. ದೇವರ ಅಂತಿಮ ಉದ್ದೇಶವು ನಮ್ಮನ್ನು

"ಕ್ರಿಸ್ತರನ್ನಾಗಿ" ಮಾಡುವುದು. ಇದು *ಅನುದಿನವೂ* ಸಮಯವನ್ನೂ ಪ್ರಯತ್ನವನ್ನೂ ತೆಗೆದುಕೊಳ್ಳುವುದು!

ನಿಮ್ಮ ಆತ್ಮಿಕತೆಯ ಮೇಲೆ ಒಂದು *ಎಚ್ಚರಿಕೆಯ* ಟೇಬಲ್ ಹಚ್ಚಿರಿ - "ನಿಮ್ಮ ಮೌನ ಸಮಯದ ಬಗ್ಗೆ ಎಂದಿಗೂ ಹೆಮ್ಮೆ ಪಟ್ಟುಕೊಳ್ಳಬೇಡಿರಿ." ದೇವರೊಂದಿಗೆ ನಡೆಯುವುದು ದೀನರನ್ನಾಗಿ ಮಾಡುತ್ತದೆ. ದೇವರೊಂದಿಗೆ ನಡೆಯುವುದು ಇತರರಿಗಿಂತ ನಿಮ್ಮನ್ನು ಹೆಚ್ಚು ಉತ್ತಮರನ್ನಾಗಿ ಮಾಡುವದಿಲ್ಲ (ಫಿಲಿಪ್ಪಿ 2:3). ಅಹಂಭಾವ ಮತ್ತು ದೇವರೊಂದಿಗೆ ನಡೆಯುವುದು ಮಿಶ್ರವಾಗುವದಿಲ್ಲ. ಯಾವ ದೇವಭಕ್ತನೂ ಅರುಹುವುಳ್ಳವನಾಗಿ ದೇವಭಕ್ತನಾಗಿರುವದಿಲ್ಲ! ನಮ್ಮ ದೈನಂದಿನ ನಡೆಯುವಿಕೆಯು ನಮ್ಮದಾಗಿರುವದಿಲ್ಲ, ಆದರೆ ದೇವರ ಮಹಿಮೆಗಾಗಿ ಇರುವುದು. ಇಂದಿನ ದಿನವು ಯಾವಾಗಲೂ ಇಲ್ಲಿರುವುದು; ನಾಳೆಯ ದಿನವು *ಎಂದೂ* ಇರುವದಿಲ್ಲ! "ದೇವರೇ, ನೀನು ಮಾಡುವಂತೆ ದಯವಿಟ್ಟು *ನನ್ನಲ್ಲಿ*, ನನ್ನೊಂದಿಗೆ, *ನನ್ನ ಮುಖಾಂತರವಾಗಿ* ಮಾಡು."

***ಬನ್ನಿರಿ, ನನ್ನೊಂದಿಗೆ ನಡೆಯಿರಿ.***

© 2009 Truth for Today